**All India Radio: Bangalore**
**National Bulletin In Kannada**
**17.03.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಶಾಂತಿಯ ದೃಢವಾದ ಪ್ರತಿಪಾದಕ ರಾಷ್ಟ್ರ ಭಾರತ - ಪ್ರಧಾನಿ ನರೇಂದ್ರ ಮೋದಿ
2. ನವದೆಹಲಿಯಲ್ಲಿಂದು ೧೦ನೇ ಆವೃತ್ತಿಯ ರೈಸಿನಾ ಸಂವಾದ ಉದ್ಘಾಟಿಸಲಿರುವ ಪ್ರಧಾನಿ
3. ಕ್ರೀಡೆಯನ್ನು ದೇಶದ ಸಂಸ್ಕೃತಿಯ ಭಾಗವಾಗಿಸುವುದು ಸರ್ಕಾರದ ಗುರಿ - ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ
4. ಅಂತಾರಾಷ್ಟ್ರೀಯ ಮಾಸ್ಟರ್ಸ್ ಲೀಗ್ ಟಿ-೨೦ ಕ್ರಿಕೆಟ್ ; ಇಂಡಿಯಾ ಮಾಸ್ಟರ್ಸ್ ತಂಡಕ್ಕೆ ಪ್ರಶಸ್ತಿ

<><><><>

ಭಾರತ ತಟಸ್ಥ ರಾಷ್ಟ್ರವಲ್ಲ ಬದಲಾಗಿ ಶಾಂತಿಯ ದೃಢವಾದ ಪ್ರತಿಪಾದಕ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಕೃತಕ ಬುದ್ಧಿಮತ್ತೆ - ಎಐ ಸಂಶೋಧಕ ಮತ್ತು ಪಾಡ್‌ಕಾಸ್ಟರ್ ಲೆಕ್ಸ್‌ಫ್ರಿಡ್ಮನ್ ಅವರೊಂದಿಗಿನ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಅವರು, ಭಾರತೀಯರು ಶಾಂತಿ ಮತ್ತು ಸಾಮರಸ್ಯವನ್ನು ಪ್ರತಿಪಾದಿಸುತ್ತಾರೆ ಎಂದರು. ಪಾಕಿಸ್ತಾನದೊಂದಿಗಿನ ಸಂಬಂಧಗಳ ಕುರಿತು ಮಾತನಾಡುತ್ತಾ, ಶಾಂತಿ ಸ್ಥಾಪಿಸುವ ಭಾರತದ ಪ್ರತಿಯೊಂದು ಪ್ರಯತ್ನಕ್ಕೂ ನೆರೆಯ ರಾಷ್ಟ್ರದಿಂದ ವಿರೋಧ ವ್ಯಕ್ತವಾಗಿದೆ ಎಂದಿರುವ ಪ್ರಧಾನಿ, ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸಲು ಇಸ್ಲಾಮಾಬಾದ್‌ನಲ್ಲಿನ ನಾಯಕರು ಕ್ರಮವಹಿಸುವ ಭರವಸೆ ವ್ಯಕ್ತಪಡಿಸಿದರು. ಉಭಯ ದೇಶಗಳ ಸಂಬಂಧಗಳ ಬಲವರ್ಧನೆಯ ಆಶಯದೊಂದಿಗೆ ೨೦೧೪ ರಲ್ಲಿ ತಮ್ಮ ಪ್ರಮಾಣವಚನ ಸಮಾರಂಭಕ್ಕೆ ಪಾಕಿಸ್ತಾನದ ಸಹವರ್ತಿ ನವಾಜ್ ಷರೀಫ್ ಅವರನ್ನು ವಿಶೇಷವಾಗಿ ಆಹ್ವಾನಿಸಿದ್ದ ಸಂದರ್ಭವನ್ನು ಪ್ರಧಾನಿ ಇದೇ ವೇಳೆ ಸ್ಮರಿಸಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೧ ಸೆಕೆಂಡ್‌ಗಳು)

ರಷ್ಯಾ-ಉಕ್ರೇನ್  ಸಂಘರ್ಷದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಎರಡು ರಾಷ್ಟ್ರಗಳು ಮಾತುಕತೆಗೆ ಮುಂದಾದಾಗ ಮಾತ್ರ ಸಂಘರ್ಷಕ್ಕೆ ಪರಿಹಾರ ಸಿಗುತ್ತದೆ. ಉಕ್ರೇನ್ ಮಿತ್ರರಾಷ್ಟ್ರಗಳೊಂದಿಗೆ ಲೆಕ್ಕವಿಲ್ಲದಷ್ಟು ಚರ್ಚೆಗಳನ್ನು ನಡೆಸಿದರೂ, ಎರಡೂ ದೇಶಗಳು ಪಾಲ್ಗೊಳ್ಳದಿದ್ದರೆ ಯಾವುದೇ ಫಲ ಸಾಧ್ಯವಿಲ್ಲ ಎಂದಿದ್ದಾರೆ. ಭಾರತ- ಚೀನಾ ಸಂಬಂಧಗಳ ಕುರಿತು ಮಾತನಾಡಿದ ಅವರು, ಹಿಂದಿನ ಶತಮಾನಗಳಲ್ಲಿ ಭಾರತ-ಚೀನಾ ನಡುವೆ ಸಂಘರ್ಷದ ಇತಿಹಾಸವಿಲ್ಲ. ಎರಡು ದೇಶಗಳು ಒಟ್ಟಾಗಿ ಜಾಗತಿಕ ಒಳಿತಿಗೆ ಕೊಡುಗೆ ನೀಡಿವೆ. ಭವಿಷ್ಯದಲ್ಲಿಯೂ ಭಾರತ- ಚೀನಾ ನಡುವೆ ಬಲವಾದ ಸಂಬಂಧಗಳು ಮುಂದುವರಿಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

<><><>

ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಈ ವೇಳೆ ಭಾರತ-ನ್ಯೂಜಿಲೆಂಡ್ ಸಂಬಂಧಗಳ ವಿವಿಧ ಅಂಶಗಳನ್ನೊಳಗೊಂಡ ಚರ್ಚೆ ನಡೆಯಲಿದೆ. ನಿನ್ನೆ ಐದು ದಿನಗಳ ಭೇಟಿಗಾಗಿ ನ್ಯೂಜಿಲೆಂಡ್ ಪ್ರಧಾನಿ ನವದೆಹಲಿಗೆ ಆಗಮಿಸಿದ್ದಾರೆ. ಇಂದು ಅವರು, ರೈಸಿನಾ ಸಂವಾದ - ೨೦೨೫ರ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ನಂತರ ಅವರು, ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ. ಭೇಟಿಯ ಭಾಗವಾಗಿ ಅವರು, ಮುಂಬೈನಲ್ಲಿ ಉದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಅವರ ಭೇಟಿ, ಭಾರತ-ನ್ಯೂಜಿಲೆಂಡ್ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿದೆ.

<><><>

ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಲ್ಲಿಂದು ೧೦ ನೇ ಆವೃತ್ತಿಯ ರೈಸಿನಾ ಸಂವಾದ ೨೦೨೫ ಅನ್ನು ಉದ್ಘಾಟಿಸಲಿದ್ದಾರೆ. ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ಮೂರು ದಿನಗಳ ರೈಸಿನಾ ಸಂವಾದ ಇಂದಿನಿಂದ ಮಾರ್ಚ್ ೧೯ ರವರೆಗೆ ನಡೆಯಲಿದೆ. "ಕಾಲಚಕ್ರ - ಜನರು, ಶಾಂತಿ ಮತ್ತು ಭೂಮಿ ಎಂಬುದು ಈ ವರ್ಷದ ಸಂವಾದದ ಧ್ಯೇಯವಾಕ್ಯವಾಗಿದೆ. ಈ

ಕಾರ್ಯಕ್ರಮದ ಸಂದರ್ಭದಲ್ಲಿ, ಜಾಗತಿಕ ನಾಯಕರು, ಚಿಂತಕರು ಮತ್ತಿತರರು ಹಲವು ವಿಷಯಾಧಾರಿತ ಚರ್ಚೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲಿದ್ದಾರೆ.

ಈ ಕುರಿತು ಒಂದು ವರದಿ: ಅಭಯ್ (55 ಸೆಕೆಂಡ್‌ಗಳು)

೧೦ ನೇ ರೈಸಿನಾ ಸಂವಾದ ಸುಮಾರು ೧೨೫ ದೇಶಗಳ ಪ್ರತಿನಿಧಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾಗಲಿದೆ. ಸಚಿವರು, ವಿವಿಧ ರಾಷ್ಟ್ರಗಳ ಮತ್ತು ಸರ್ಕಾರಗಳ ಮಾಜಿ ಅಧ್ಯಕ್ಷರು, ಮಿಲಿಟರಿ ಕಮಾಂಡರ್‌ಗಳು, ಕೈಗಾರಿಕೋದ್ಯಮಿಗಳು, ತಂತ್ರಜ್ಞಾನ ನಾಯಕರು, ಶಿಕ್ಷಣ ತಜ್ಞರು, ಮಾಧ್ಯಮ ಪ್ರತಿನಿಧಿಗಳು ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ೩ ಸಾವಿರದ ೫೦೦ ಕ್ಕೂ ಹೆಚ್ಚು ಜನರು ಈ ಸಂವಾದದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳಲಿದ್ದು, ವಿಶ್ವದಾದ್ಯಂತ ಲಕ್ಷಾಂತರ ಜನರು ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಈ ಕಾರ್ಯಕ್ರಮವನ್ನು ವೀಕ್ಷಿಸಲಿದ್ದಾರೆ. ರೈಸಿನಾ ಸಂವಾದಕ ಜಾಗತಿಕ ಸಮುದಾಯ ಎದುರಿಸುತ್ತಿರುವ ಅತ್ಯಂತ ಸವಾಲಿನ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿರುವ ಭಾರತದ ಭೌಗೋಳಿಕ ರಾಜಕೀಯ ಮತ್ತು ಭೂ ಅರ್ಥಶಾಸ್ತ್ರದ ಪ್ರಮುಖ ಸಮ್ಮೇಳನವಾಗಿದೆ. ಪ್ರತಿ ವರ್ಷ, ರಾಜಕೀಯ, ವ್ಯವಹಾರ, ಮಾಧ್ಯಮ ಮತ್ತು ನಾಗರಿಕ ಸಮಾಜದ ನಾಯಕರು ನವದೆಹಲಿಯಲ್ಲಿ ಈ ವೇದಿಕೆಯಡಿ ಒಟ್ಟುಗೂಡಿ ವಿಶ್ವದ ಸದ್ಯದ ಪರಿಸ್ಥಿತಿ ಹಾಗೂ ವಿವಿಧ ಸಮಕಾಲೀನ ವಿಷಯಗಳಲ್ಲಿ ಸಹಕಾರಕ್ಕಾಗಿ ಅವಕಾಶಗಳನ್ನು ಅನ್ವೇಷಿಸುವ ಕುರಿತು ಚರ್ಚೆ ನಡೆಸುತ್ತಾರೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಹಭಾಗಿತ್ವದಲ್ಲಿ ಅಬ್ಸರ್ವರ್ ಸಂಸೋಧನಾ ಪ್ರತಿಷ್ಠಾನ ಈ ಸಮ್ಮೇಳನವನ್ನು ಆಯೋಜಿಸುತ್ತದೆ.

<><><>

ಕ್ರೀಡೆಯನ್ನು ದೇಶದ ಸಂಸ್ಕೃತಿ ಮತ್ತು ಜೀವನಶೈಲಿಯ ಭಾಗವಾಗಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಕೇಂದ್ರ ಯುವ ವ್ಯವಹಾರಗಳ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಫಿಟ್ ಇಂಡಿಯಾ ಕಾರ್ನಿವಲ್‌ನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಆರೋಗ್ಯಕರ ಸಮಾಜ ವಿಕಸಿತ ಭಾರತದ ಗುರಿ ಸಾಕಾರವನ್ನು ಖಚಿತ ಪಡಿಸುತ್ತದೆ. ಯೋಗ, ಎರೋಬಿಕ್ಸ್ ಮತ್ತು ಜುಂಬಾದಂತಹ ಚಟುವಟಿಕೆಗಳು ಜನರಲ್ಲಿ ಆರೋಗ್ಯಕರ ಜೀವನಶೈಲಿಯ ಬಗ್ಗೆ ಉತ್ತಮ ಸಂದೇಶ ನೀಡುತ್ತದೆ ಎಂದರು.

ಧ್ವನಿ : ಮನ್ಸುಖ್ ಮಾಂಡವೀಯ (೧೮ ಸೆಕೆಂಡ್‌ಗಳು)

ಕಾರ್ಯಕ್ರಮದಲ್ಲಿ ಸಚಿವರು ಫಿಟ್ ಇಂಡಿಯಾ ಸೈಕಲ್ ಉಪಕ್ರಮದ ಪ್ರಯೋಜನಗಳ ಕುರಿತ ಮಾಹಿತಿ ಹೊಂದಿರುವ ಹೊತ್ತಿಗೆಯನ್ನು ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ನಟ ಆಯುಷ್ಮಾನ್ ಕುರಾನಾ, ಕುಸ್ತಿಪಟು ಸಂಗ್ರಾಮ್ ಸಿಂಗ್ ಮತ್ತಿತರ ಕ್ರೀಡಾಪಟುಗಳು ಭಾಗವಹಿಲಿಸದ್ದಾರೆ.

<><><>

ಪ್ರಧಾನಮಂತ್ರಿ ಇಂಟರ್ನ್ ಶಿಪ್ ಯೋಜನೆ ಪಿಐಎಂಎಸ್ ಗಾಗಿ ಮೀಸಲಾದ ಆಪ್ ಅನ್ನು ಇಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಿಡುಗಡೆಗೊಳಿಸಲಿದ್ದಾರೆ. ಪಿಐಎಂಎಸ್ ಯೋಜನೆಯಡಿ ಇದೇ ೩೧ರವರೆಗೆ ಸ್ವೀಕರಿಸಲಾಗುತ್ತಿರುವ ಅರ್ಜಿಗಳ ೨ನೇ ಸುತ್ತಿನ ಸುಗಮ ನೋಂದಣಿಯ ಮೂಲಕ ಹೆಚ್ಚಿನ ಭಾಗವಹಿಸುವಿಕೆ ಉತ್ತೇಜಿಸಲು ಈ ಆಪ್ ಬಿಡುಗಡೆ ಮಾಡಲಾಗುತ್ತಿದೆ. ಆಪ್ ಬಿಡುಗಡೆ ಜೊತೆಗೆ ಪಿಐಎಂಎಸ್ ಗೆ ಮೀಸಲಾದ ಸೌಲಭ್ಯ ಕೇಂದ್ರವನ್ನು ಕೋಲ್ಕೊತ್ತಾದಲ್ಲಿ ಸ್ಥಾಪಿಸಲಾಗುವುದು. ಈ ಕೇಂದ್ರ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ಕೈಗಾರಿಕಾ ಒಕ್ಕೂಟದ ಸಹಯೋಗದೊಂದಿಗೆ ನಿರ್ಮಾಣಗೊಳ್ಳುತ್ತಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

<><><>

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ನವದೆಹಲಿಯಲ್ಲಿ ನಿನ್ನೆ ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ತುಲಸಿ ಗಬ್ಬಾರ್ಡ್ ಅವರೊಂದಿಗೆ ಸಭೆ ನಡೆಸಿದರು. ಈ ವೇಳೆ ಉಭಯ ನಾಯಕರು ಭಾರತ-ಅಮೆರಿಕ ಸಂಬಂಧಗಳು ಹಾಗೂ ವಿವಿಧ ಅಂಶಗಳ ಕುರಿತು ವಿಸ್ತೃತ ಚರ್ಚೆ ನಡೆಸಿದರು ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ತಮ್ಮ ಬಹುರಾಷ್ಟ್ರ ಭೇಟಿಯ ಭಾಗವಾಗಿ ತುಲಸಿ ಗಬ್ಬಾರ್ಡ್ ಅವರು, ಭಾರತಕ್ಕೆ ಭೇಟಿ ನೀಡಿದ್ದಾರೆ.

<><><>

ರಾಯ್‌ಪುರದ ಶಾಹಿದ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಉದ್ಘಾಟನಾ ಆವೃತ್ತಿಯ ಅಂತಾರಾಷ್ಟ್ರೀಯ ಮಾಸ್ಟರ್ಸ್ ಲೀಗ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಇಂಡಿಯಾ ಮಾಸ್ಟರ್ಸ್ ತಂಡ ವೆಸ್ಟ್ ಇಂಡೀಸ್ ಮಾಸ್ಟರ್ಸ್ ವಿರುದ್ಧ ೬ ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ೭ ವಿಕೆಟ್ ನಷ್ಟಕ್ಕೆ ೧೪೮ ರನ್ ಗಳಿಸಿದೆ. ಇದಕ್ಕೆ ಉತ್ತರವಾಗಿ ಸಚಿನ್ ತೆಂಡೂಲ್ಕರ್ ನೇತೃತ್ವದ

ಇಂಡಿಯಾ ಮಾಸ್ಟರ್ಸ್ ಕೇವಲ ೧೭.೧ ಓವರ್‌ಗಳಲ್ಲಿ ೧೪೯ ರನ್ ಗಳಿಸಿ ಉದ್ಘಾಟನಾ ಆವೃತ್ತಿಯ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ೭೪ ರನ್ ಗಳಿಸಿದ ಅಂಬಟ್ಟಿ ನಾಯ್ಡು ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.

<><><><>

೨೦೨೫ ರ ಕಬಡ್ಡಿ ವಿಶ್ವಕಪ್ ಇಂದು ಸಂಜೆ ಇಂಗ್ಲೆಂಡ್‌ನಲ್ಲಿ ಆರಂಭವಾಗಲಿದೆ. ವೊಲ್ವರ್‌ಹ್ಯಾಂಪ್ಟನ್‌ನಲ್ಲಿ ನಡೆಯಲಿರುವ ತಮ್ಮ ಮೊದಲ ಪಂದ್ಯದಲ್ಲಿ ಭಾರತೀಯ ಪುರುಷರ ತಂಡ ಇಟಲಿ ತಂಡವನ್ನು ಎದುರಿಸಲಿದೆ. ಈ ಪಂದ್ಯ ಭಾರತೀಯ ಕಾಲಮಾನ ಸಂಜೆ ೫:೩೦ ಕ್ಕೆ ಆರಂಭವಾಗಲಿದೆ. ಏಳು ದಿನಗಳ ಕಾಲ ನಡೆಯಲಿರುವ ಈ ಪಂದ್ಯಾವಳಿಯ ಭಾಗವಾಗಿ ೭೦ ಕ್ಕೂ ಹೆಚ್ಚು ಪಂದ್ಯಗಳು ಬ್ರಿಟನ್‌ನ ವೆಸ್ಟ್ ಮಿಡ್‌ಲ್ಯಾಂಡ್ಸ್ ಪ್ರದೇಶದ ಬರ್ಮಿಂಗ್ಹ್ಯಾಮ್, ಕವೆಂಟ್ರಿ, ವಾಲ್ಸಾಲ್ ಮತ್ತು ವೊಲ್ವರ್‌ಹ್ಯಾಂಪ್ಟನ್‌ನಲ್ಲಿ ನಡೆಯಲಿವೆ. ಪುರುಷರ ವಿಭಾಗದಲ್ಲಿ ೧೦ ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಭಾರತ ಇಟಲಿ, ಸ್ಕಾಟ್ಲೆಂಡ್, ವೇಲ್ಸ್ ಮತ್ತು ಚೀನಾದೊಂದಿಗೆ ಬಿ ಗುಂಪಿನಲ್ಲಿದೆ. ಇದು ಎರಡನೇ ಆವೃತ್ತಿಯ ಕಬಡ್ಡಿ ವಿಶ್ವಕಪ್ ಆಗಿದ್ದು, ೨೦೧೯ ರಲ್ಲಿ ಮಲೇಷ್ಯಾ ಆಯೋಜಿಸಿದ್ದ ಉದ್ಘಾಟನಾ ಆವೃತ್ತಿಯಲ್ಲಿ, ಭಾರತ, ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿತ್ತು.

<><><><>